## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2013–14ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಯೋಜನೆಯಡಿ 2012–13ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ರಾಜ್ಯ ಸಹಾಯಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವ – ಕುರಿತು.

ಪ್ರಸ್ತಾವನೆ :

2013–14ನೇ ಸಾಲಿನ ರಾಜ್ಯ ಆಯವ್ಯಯದ ಲೆಕ್ಕ ಶೀರ್ಷಿಕೆ 2810-01-198-1-01-(Lumpsum) ರೂ. 120.00 ಲಕ್ಷಗಳನ್ನು ರಾಷ್ಟ್ರೀಯ ಜೈವಾನಿಲ ಯೋಜನೆಯಡಿ, ರಾಜ್ಯ ಅನಿಲ ಯೋಜನೆಯಡಿ ರಾಜ್ಯ ಸಹಾಯಧನ ಪಾವತಿಸಲು ನಿಗದಿಪಡಿಸಲಾಗಿದೆ. ಇದರನ್ವಯ 2012–13ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ರಾಜ್ಯ ಸಹಾಯಧನವನ್ನು ಬಿಡುಗಡೆ ಮಾಡಬೇಕಾಗಿದ್ದು, 2012–13ನೇ ಸಾಲಿನಲ್ಲಿ ಶೇ. 100ರಷ್ಟು ಹಾಗೂ ಹೆಚ್ಚು ಪ್ರಗತಿ ಸಾಧಿಸಿದ ಜಿಲ್ಲಾ ಪಂಚಾಯಿತಿಗಳಿಗೆ ಬಾಕಿ ಇರುವ ಅನುದಾನವನ್ನು, ಲಭ್ಯವಿರುವ ಅನುದಾನಕ್ಕೆ ಮಿತಿಗೊಳಪಟ್ಟು ಬೀದರ್, ಚಿಕ್ಕಬಳ್ಳಾಪುರ, ಹಾಸನ, ದಕ್ಷಿಣ ಕನ್ನಡ, ಉಡುಪಿ, ಹಾವೇರಿ, ಉತ್ತರ ಕನ್ನಡ, ಶಿವಮೊಗ್ಗ ಮತ್ತು ಬೆಂಗಳೂರು ಗ್ರಾ, ಜಿಲ್ಲಾ ಪಂಚಾಯತ್‌ಗಳಿಗೆ ಕೆಲವೊಂದು ಷರತ್ತು ಮತ್ತು ನಿಬಂಧನೆಗೊಳಪಟ್ಟು ರಾಜ್ಯ ಸಹಾಯಧನ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 27 ಜೈಅಯೋ 2013, ಬೆಂಗಳೂರು ದಿನಾಂಕ : 20.12.2013**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ 2013–14ನೇ ಸಾಲಿನಲ್ಲಿ, 2012–13ನೇ ಸಾಲಿಗಿಂತ ಹಿಂದೆ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ರಾಜ್ಯ ಸಹಾಯಧನ ಪಾವತಿಸಲು ರೂ. 39.51 ಲಕ್ಷಗಳನ್ನು (ಮೂವತ್ತೊಂಬತ್ತು ಲಕ್ಷದ ಐವತ್ತೊಂದು ಸಾವಿರಗಳು ಮಾತ್ರ) **ಅನಿಲ ಯೋಜನೆಯಡಿಯಲ್ಲಿ ಮೂರನೇ ಕಂತಾಗಿ ಲೆಕ್ಕ ಶೀರ್ಷಿಕೆ 2810-01-198-1-01 (Lumpsum)**ರಡಿ ಈ ಕೆಳಕಂಡ ಜಿಲ್ಲಾ ಪಂಚಾಯತ್‌ಗಳಿಗೆ ಹಂಚಿಕೆಯಂತೆ ಬಿಡುಗಡೆ ಮಾಡಿ ಆದೇಶಿಸಿದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲಾ ಪಂಚಾಯತ್ | ಬಿಡುಗಡೆ ಮಾಡಿದ ಅನುದಾನ |
|---|---|---|
| 01 | ಬೀದರ್ | 0.07 |
| 02 | ಚಿಕ್ಕಬಳ್ಳಾಪುರ | 2.63 |
| 03 | ಹಾಸನ | 7.53 |
| 04 | ದಕ್ಷಿಣ ಕನ್ನಡ | 4.30 |
| 05 | ಉಡುಪಿ | 12.40 |
| 06 | ಹಾವೇರಿ | 6.68 |
| 07 | ಉತ್ತರ ಕನ್ನಡ | 2.43 |
| 08 | ಶಿವಮೊಗ್ಗ | 1.16 |
| 09 | ಬೆಂಗಳೂರು (ಗ್ರಾ) | 2.31 |
| | ಒಟ್ಟು | **39.51** |

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗುತ್ತಿದ್ದು, ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಮಾಡತಕ್ಕದಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆ ಸಹಮತಿ ಸಂಖ್ಯೆ : ಆಇ 372 ವೆಚ್ಚ-6/2013 ದಿನಾಂಕ **19.12.2013ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.**

...ತ್ತು ಮತ್ತು ನಿಬಂಧನೆಗಳು :

1. ಈ ಯೋಜನೆಯ ಮಾರ್ಗಸೂಚಿಯನ್ವಯ ಪ್ರತಿ ಜಿಲ್ಲೆಯ ಪ್ರತಿಯೊಂದು ಅನಿಲ ಸ್ಥಾವರದ ಜಿ.ಪಿ.ಎಸ್., ಫೋಟೋ, ಫಲಾನುಭವಿಗಳ ಫೋಟೋ, ಫಲಾನುಭವಿಗಳ ವಿವರಗಳನ್ನು ದಾಖಲಾತಿ ರಿಜಿಸ್ಟರ್‌ನಲ್ಲಿ ದಾಖಲಿಸುವುದು.
2. ಪ್ರತಿಯೊಂದು ಅನಿಲ ಸ್ಥಾವರ ಘಟಕಕ್ಕೆ ಸಂಬಂಧಪಟ್ಟಂತೆ, ಪ್ರತ್ಯೇಕ ಫಲಾನುಭವಿಯ ಕಡತ ನಿರ್ವಹಿಸತಕ್ಕದ್ದು.
3. ಪ್ರತಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಫಲಾನುಭವಿಗಳ ವಿವರ ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಗಳನ್ನು ಕಡ್ಡಾಯವಾಗಿ ಮಂಡಿಸುವುದು. ಪಂಚತಂತ್ರ ವರ್ಕ್ ಸಾಫ್ಟ್‌ದಲ್ಲಿ ಅಳವಡಿಸುವುದು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರ ಹಂತದಲ್ಲಿ ಶೇ. 50%ರಷ್ಟು ಉಪ ಕಾರ್ಯದರ್ಶಿ, ಮುಖ್ಯ ಲೆಕ್ಕಾಧಿಕಾರಿ ಹಾಗೂ ಮುಖ್ಯ ಯೋಜನಾಧಿಕಾರಿ ಜಿಲ್ಲಾ ಪಂಚಾಯತ್‌ರವರ ಹಂತದಲ್ಲಿ ತಲಾ ಶೇ. 15%ರಷ್ಟು (ಒಟ್ಟು ಶೇ. 45%ರಷ್ಟು) ಕಡ್ಡಾಯವಾಗಿ ಪರಿವೀಕ್ಷಣೆ (Inspection) ಮಾಡುವುದು.
5. ತಾಲ್ಲೂಕು ಪಂಚಾಯತ್ ಅಧಿಕಾರಿಗಳ ಹಂತದಲ್ಲಿ ಶೇ. 25%ರಷ್ಟು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಹಂತದಲ್ಲಿ ಶೇ. 25% ರಷ್ಟು ಕಡ್ಡಾಯವಾಗಿ ಪರಿವೀಕ್ಷಣೆ (Inspection) ಮಾಡುವುದು.
6. ಈ ಮೇಲಿನ ಹಂತದಲ್ಲಿ ಪರಿವೀಕ್ಷಣೆ ಮಾಡಲಾದ ವಿವರಗಳನ್ನು ಒಂದು ಸವಿವರವಾದ ಟಿಪ್ಪಣಿಯೊಂದಿಗೆ ನಿರ್ದೇಶಕರು, ಗ್ರಾಮೂಸೌ–2 ಕೋಶ ರವರಿಗೆ ಸಲ್ಲಿಸತಕ್ಕದ್ದು.
7. ಯೋಜನೆಯ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಲು ಹಾಗೂ ಇದರ ಪಾಲನೆಯ ಸಂಪೂರ್ಣ ಜವಾಬ್ದಾರಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರು ಮಾಡತಕ್ಕದ್ದು.
8. ಪ್ರತಿ ಮಾಹೆ 5ನೇ ದಿನಾಂಕದೊಳಗೆ ಪ್ರಗತಿ ವರದಿಯನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ವಿ.ಶಿವಕುಮಾರ್)
ಉಪ ನಿರ್ದೇಶಕರು (ಜೈವಾನಿಲ)
ಗ್ರಾಮೂಸೌ–2 ಕೋಶ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೀದರ್, ಚಿಕ್ಕಬಳ್ಳಾಪುರ, ಹಾಸನ, ದಕ್ಷಿಣ ಕನ್ನಡ, ಉಡುಪಿ, ಹಾವೇರಿ, ಉತ್ತರ ಕನ್ನಡ, ಬೆಂಗಳೂರು (ಗ್ರಾ) ಮತ್ತು ಶಿವಮೊಗ್ಗ ಜಿಲ್ಲೆ
3. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4. ಜಿಲಾ ಖಜಾನಾಧಿಕಾರಿಗಳು, ಬೀದರ್, ಚಿಕ್ಕಬಳ್ಳಾಪುರ, ಹಾಸನ, ದಕ್ಷಿಣ ಕನ್ನಡ, ಉಡುಪಿ, ಹಾವೇರಿ, ಉತ್ತರ ಕನ್ನಡ, ಬೆಂಗಳೂರು (ಗ್ರಾ) ಮತ್ತು ಶಿವಮೊಗ್ಗ ಜಿಲ್ಲೆ
5. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್ ನಂ. 49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜ ಭವನ, ಸೌತ್ ಎಂಟ್ರನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
6. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.